ಲೋಕಧ್ವನಿ

# ಸಿವಿಲ್ ಎಂಜಿನಿಯರ್‌ಗೆ ಹೇರಳ ಉದ್ಯೋಗಾವಕಾಶ

## ಕೆಲಸದ ಅವಕಾಶಗಳು, ಸವಾಲುಗಳು ಉಪನ್ಯಾಸ | ವಿಡಿಐಟಿ ಹಳಿಯಾಳ ಆಯೋಜನೆ



**ಹಳಿಯಾಳ:** ಕೆಎಲ್‌ಎಸ್‌ವಿಡಿಐಟಿ ಹಳಿಯಾಳದಲ್ಲಿ ಸಿವಿಲ್ ಇಂಜಿನಿಯರಿಂಗ್‌ನಲ್ಲಿನ ಉದ್ಯೋಗವಕಾಶಗಳು ಮತ್ತು ಸವಾಲುಗಳ ಕುರಿತ ಉಪನ್ಯಾಸ ಕಾರ್ಯಕ್ರಮವು ಇತ್ತೀಚೆಗೆ ಜರುಗಿತು.

ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಹಳಿಯಾಳದ ಆಕೃತಿ ಅಸೋಸಿಯೇಟ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮಾಜಿ ವಿದ್ಯಾರ್ಥಿ ಪ್ರತೀಕ್ ಹುನ್ನವಾಡಕರ್ ಆಗಮಿಸಿದ್ದರು.

ಸಿವಿಲ್ ಕ್ಷೇತ್ರದಲ್ಲಿ ಬಳಸಲಾಗುತ್ತಿರುವ ಆಧುನಿಕ ತಂತ್ರಜ್ಞಾನದ ಮಾಹಿತಿ ನೀಡುತ್ತ, ಕಟ್ಟಡ ವಿನ್ಯಾಸ ತಯಾರಿಸುವ ತಂತ್ರಾಂಶ ಕುರಿತಾಗಿ ವಿವರಿಸಿದರು. ಇಂದು ಸಿವಿಲ್ ಇಂಜಿನಿಯರ್ಸ್‌ಗಳಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೇರಳ ಉದ್ಯೋಗವಕಾಶಗಳಿದ್ದು, ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕೆಂದರು. ರಸ್ತೆ ನಿರ್ಮಾಣ, ಕಟ್ಟಡ ನಿರ್ಮಾಣ, ಆಣೆಕಟ್ಟು ನಿರ್ಮಾಣ ಹೀಗೆ ಮುಂತಾದ ವಿಭಾಗದಲ್ಲಿ ಸಿವಿಲ್ ಅಭಿಯಂತರರಿಗೆ ವಿಪುಲ ಅವಕಾಶವಿದೆ ಎಂದರು.

ವಿಭಾಗದ ಮುಖ್ಯಸ್ಥ ಡಾ. ಆಶಿಕ್ ಬಳ್ಳಾರಿ ಸ್ವಾಗತಿಸಿದರು. ಪ್ರೊ. ಹರ್ಷ ಜಾಧವ ವಂದಿಸಿದರು. ಪ್ರೊ. ಹರ್ಷವರ್ಧನ್ ಕಾರ್ಯಕ್ರಮ ಸಂಯೋಜಿಸಿದ್ದರು. ಮಹಾ ವಿದ್ಯಾಲಯದ ಸಿವಿಲ್ ವಿಭಾಗವು ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ 50ಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ವಿಡಿ ಐ ಟಿ ಮಾಜಿ ವಿದ್ಯಾರ್ಥಿಗಳು ಕಾಲೇಜಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ತಾಂತ್ರಿಕ ಜ್ಞಾನ ಹೆಚ್ಚಿ ಸುವ ಕಾರ್ಯ ಕೈಗೊಂಡಿರುವುದು ಅಭಿನಂದನೀಯ ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಿಳಿಸಿದ್ದಾರೆ.

## ಮಾನಕ ಬ್ಯುರೋ ರಸಪ್ರಶ್ನೆ ಕಾರ್ಯಕ್ರಮ

**ಹಳಿಯಾಳ:** ಕೆಎಲ್‌ಎಸ್‌ವಿಡಿಐಟಿ ಹಳಿಯಾಳದ ಮಾನಕ ಬ್ಯುರೋ ಕ್ಲಬ್ ವತಿಯಿಂದ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಉತ್ಪನ್ನಗಳ ಗುಣಮಟ್ಟವನ್ನರಿಯಲು ಮಾನಕವು ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ವಿದ್ಯಾರ್ಥಿಗಳಲ್ಲಿ ಭಾರತೀಯ ಮಾನಕದ ಅರಿವನ್ನು ಮೂಡಿಸಲು ಇಂತಹ ರಸಪ್ರಶ್ನೆ ಕಾರ್ಯಕ್ರಮಗಳು ಸಹಕಾರಿಯಾಗುತ್ತದೆ ಎಂದು ನುಡಿದರು.

ಆಡಳಿತ ವಿಭಾಗದ ಡೀನ್ ಪ್ರೊ. ಮಂಜುನಾಥ ಡಿ, ಐಐಐಎಫ್ ವಿಭಾಗದ ಡೀನ್ ಪ್ರೊ. ಸುಧೀರ್ ಕುಲಕರ್ಣಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಐಎಸ್ಐ, ಬಿಐಎಸ್ಐ ಮಾನಕಗಳು ಉತ್ಪನ್ನಗಳ ಗುಣಮಟ್ಟವನ್ನು ನಿರ್ಧರಿಸುವ ಕುರಿತಾದ ರಸಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಉತ್ತರಿಸಿದರು.

ಡಾ. ಶಂಕರ್ ಬಡಿಗೇರ್ ಮತ್ತು ಡಾ. ಅನಂತ್ ಜೋಶಿ ಕಾರ್ಯಕ್ರಮವನ್ನು ಸಂಯೋಜಿಸಿದ್ದರು. ಮಹಾವಿದ್ಯಾಲಯದ ಮಾನಕ ಬ್ಯುರೋ ಕ್ಲಬ್ ಮತ್ತು ಭಾರತೀಯ ಮಾನಕ ಬ್ಯುರೋ ಕ್ಲಬ್ ಹುಬ್ಬಳ್ಳಿ ಶಾಖೆಯ ಜಂಟಿ ವತಿಯಿಂದ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ 15 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಪ್ರಥಮ ಸ್ಥಾನ ಕುಮಾರಿ. ಐಶ್ವರ್ಯ ಎಸ್ ಕೆ, ದ್ವಿತೀಯ ಕುಮಾರಿ. ಮಧು ಎಂ ಹೆಚ್, ತೃತೀಯ ಕುಮಾರಿ. ನೂಪುರ್ ಕೆ ಎಂ ಪಡೆದುಕೊಂಡರು. ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ 6000 ರೂ., ದ್ವಿತೀಯ 4000 ರೂ ಹಾಗೂ ತೃತೀಯ 2000 ರೂ. ನೀಡಿ ಪುರಸ್ಕರಿಸಲಾಯಿತು. ಕು. ಅಭಿಷೇಕ್ ಬಳ್ಳಾರಿ ಗೆ ಸಮಾಧಾನಕರ ಬಹುಮಾನ 500ರೂ ನೀಡಲಾಯಿತು.



Main Edition
Nov 16, 2023 Page No. 3
Powered by : eReleGo.com